ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು): ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ ಈ ಹೇಳಿಕೆ ನೀಡುತ್ತಿದ್ದೇನೆ.

ಸೌದತ್ತಿ ತಾಲ್ಲೂಕು ಸುತಗಟ್ಟಿ ಮತ್ತು ಹಿಟ್ಟಣಗಿ ಗ್ರಾಮಗಳಿಗೆ ಕುಡಿಯುವ ನೀರು ಸಹಬರಾಜು ಯೋಜನೆ ರೂ 8.79 ಲಕ್ಷಗಳಿಗೆ ಮಂಜೂರಾಗಿದೆ ಈ ವರ್ಷ(1990-91) ಅಯವ್ಯಯದಲ್ಲಿ ರೂ 1 ಲಕ್ಷಗಳ ಅನುದಾನವಿದ್ದು ಈಗಾಗಲೇ 98,000 ರೂ. ಖರ್ಚಾಗಿದೆ.

ಹಿಟ್ಟಣಗಿ ಗ್ರಾಮದಲ್ಲಿ ಒಂದು ಕಿರುನೀರು ಸರಬರಾಜು ಯೋಜನೆಯೂ ಸಹ ಕೆಲಸಮಾಡುತ್ತಿದೆ.

ಈ ಯೋಜನೆಯನ್ನು 1991-92 ರಲ್ಲಿ ಪೂರ್ಣಗೊಳಿಸಲಾಗುವುದು.

(13) ಭದ್ರಾವತಿಯಲ್ಲಿ ಕೋರ್ಟ್ ಕಟ್ಟಡಗಳನ್ನು ಕಟ್ಟುವುದು.

ಶ್ರೀ ಎಸ್. ಇಸಾಮಿಯಾ: ಮಾನ್ಯ ಅಧ್ಯಕ್ಷರೇ ಭದ್ರಾವತಿಯಲ್ಲಿ ಕ್ರಿಮಿನಲ್ ಮತ್ತು ಸಿವಿಲ್ ಕೋರ್ಟುಗಳು ನಡೆಯುತ್ತಿರುವುದು ಸರಿಯಷ್ಟೆ ಕಟ್ಟಡ ಒಂದೇ ಇದ್ದು ಕೇಸುಗಳು ನಡೆಸಲು ತೊಂದರೆಯಾಗುತ್ತಿದ್ದು ಸುಮಾರು ಕೇಸುಗಳು ಬಾಕಿ ಇರುವುದರಿಂದ ಹಿಂದಿನ ಸರ್ಕಾರ ಕಟ್ಟಡ ಕಟ್ಟಲು 15ಲಕ್ಷ ರಪಾಯಿಗಳನ್ನು ಮಂಜೂರು ಮಾಡಿ ಇದರ ಪೈಕಿ 5ಲಕ್ಷ ಬಿಡುಗಡೆ ಮಾಡಿತು. ಅಲ್ಲಿನ ಪಿ.ಡಬ್ಲ್ಯೂ.ಡಿ. ಅಧಿಕಾರಿಗಳ ಉದಾಸೀನದಿಂದ ಇಲ್ಲಿಯವರೆಗೂ ಕಟ್ಟಡ ಆಗದೇ ಇರುವುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೆ? ಮುಂದಿನ ಯಾವ ಕ್ರಮ ತೆಗೆದುಕೊಂಡಿದ್ದೀರಿ ಎಂಬುದಕ್ಕೆ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ವಿ. ಮುನಿಯಪ್ಪ: (ರಾಜ್ಯ ರೇಷ್ಮೆ ಸಚಿವರು) ಮಾನ್ಯ ಅಧ್ಯಕ್ಷರೇ ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರ ಪರವಾಗಿ ಈ ಹೇಳಿಕೆಯನ್ನು ಕೊಡುತ್ತೇನೆ. ಭದ್ರಾವತಿಯಲ್ಲಿ ಕೋರ್ಟ್ ಕಟ್ಟಡದ ಬಗ್ಗೆ ಸರ್ಕಾರ ಆಡಳಿತಾತ್ಮಕ ಮಂಜೂರಾತಿಯನ್ನು ಆದೇಶದ ಸಂಖ್ಯೆ 217 ಎಲ್.ಸಿ.ಇ. 90 ದಿನಾಂಕ 13-3-91ರಲ್ಲಿ ಹೊರಡಿಸಿದೆ.

(14) ಮೈಸೂರು ಲ್ಯಾಂಪ್ ವರ್ಕ್ಸ್ ಕಾರ್ಖಾನೆಯಲ್ಲಿ ತಾಂತ್ರಿಕ ಹುದ್ದೆಗಳಿಗೆ ತರಬೇತಿ.

Sri T.B. Jayachandra : Sir, I wish to raise the following subjects under rule 334. It is an established fact, that the Technical Staff appointed in the Mysore Lamp Works Ltd., had to undergo three years technical training and a probationery preiod of Six months. Only after that their services would be regularised. But it is astonished to note that the period of technical training is being reduced to two years by the authorities. This is being done deliberately without taking prior permission of the Govt, or any authority but just to favour the interested condidate. Therfore I request the Hon'ble Chief Minister to interfere and stop such illegal changes in the interest of the company.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ ಮೈಸೂರು ಲ್ಯಾಂಪ್ಸ್ ಸಂಸ್ಥೆಯು 1936 ರಲ್ಲಿ ಸ್ಥಾಪಿತವಾಯಿತು. ಮತ್ತು ಇದು 1983ರಲ್ಲಿ ಮೊಟ್ಟಮೊದಲ ಬಾರಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಉದ್ಯಮಗಳಲ್ಲಿ ಒಂದಾಗಿದೆಯೆಂದು ಘೋಷಿಸಲಾಯಿತು. ಸಂಸ್ಥೆಯು ನೇಮಕಾತಿ ಮಾಡುತ್ತಿರುವ ತಾಂತ್ರಿಕ ವರ್ಗದ ತರಬೇತಿ ಅವಧ್ಯಿಯು 3